| Form No.4 (Civil)<br>Deposition Sheets<br>(R.P.No.57) |
|---|

## ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಯಾದಗಿರಿ

ಎಸ್.ಸಿ. ಸಂಖ್ಯೆಃ 01/2017 & 55/2018

ಪ್ರಾ. ಸಾ. 1 ಚಾ. ಸಾ. 1

| | |
|---|---|
| ಸಾಕ್ಷಿದಾರರ ಹೆಸರು | : ಮನೀಶ್ |
| ತಂದೆಯ ಹೆಸರು | : ಕಿಶೋರ |
| ವಯಸ್ಸು | : 22 ವರ್ಷಗಳು |
| ಉದ್ಯೋಗ | : ವ್ಯಾಪಾರ |
| ವಾಸ | : ಯಾದಗಿರಿ |

ಪ್ರಮಾಣವಚನ ಬೋಧಿಸಿದ ದಿನಾಂಕಃ 05-09-2019

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದ

ಆರೋಪಿತರು ಗೊತ್ತಿಲ್ಲ.

2. ಆರೋಪಿತರು ನಮ್ಮ ಮನಗೆ ಯಾರೋ ಬಂದು ಬೆಳ್ಳಿ ಮತ್ತು ಇತರೇ ಸಾಮಾನುಗಳನ್ನು ದರೋಡೆ ಮಾಡಿಕೊಂಡು ಹೋಗಿದ್ದಾರೆ. ಆದರೆ ಆರೋಪಿತರೇ ಅಂತಾ ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ನಮ್ಮ ಮನೆ ದರೋಡೆ ಆದ ಬಗ್ಗೆ ದೂರು ಕೊಟ್ಟಿದ್ದೇನೆ.

3. ದಿಃ 14.2.2015 ರಂದು ನಾನು ನನ್ನ ದೊಡ್ಡಪ್ಪನ ಮನೆಯಲ್ಲಿ ಮಲಗಿದ್ದೆ. ನನ್ನ ದೊಡ್ಡಪ್ಪ ದೊಡ್ಡಮ್ಮ ಊರಿಗೆ ಹೋಗಿದ್ದರು. ನನ್ನ ಜೂತೆ ದಶರತ, ಮಾಹವೀರ ಮತ್ತು ಅಂಕಿತ ಮಲಗಿದ್ದರು. ರಾತ್ರಿ ಹೊತ್ತು ಯಾರೋ ಬಂದು ನಮ್ಮನ್ನು ಕಟ್ಟಿ ಹಾಕಿ ಮನೆಯಿಂದ ಏನೆನೋ ತೆಗೆದುಕೊಂಡು ಹೋದರು. ನಮ್ಮ ಮನೆಯಿಂದ ಏಷ್ಟು ಬಂಗಾರ ಮತ್ತು ಹಣ ತೆಗೆದುಕೊಂಡು ಹೋದ್ದಾರೆ ಅಂತಾ ಗೊತ್ತಿಲ್ಲ. ಆರೋಪಿತರೆ ನಮ್ಮ ಮನೆಯನ್ನು ದರೋಡೆ ಮಾಡಿದ್ದಾರೆ ಅಂತಾ ಪೋಲೀಸರಿಗೆ ಹೇಳಿಲ್ಲ.

(ಈ ಹಂತದಲ್ಲಿ ಸಾರ್ವಜನಿಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ಅನುಮತಿ ಕೊಟ್ಟಿದೆ)

ಪಾಟೀ ಸವಾಲು ಃ ಸಾ.ಅ. ರವರಿಂದ ಃ

4. ದಿಃ 15.2.2016 ರಂದು ಬೆಃ 3.00 ಗಂಟೆಗೆ ನಾನು, ಚಾಸಾ-4 ರಿಂದ 6 ಇವರು ಮಲಗಿಕೊಂಡಿದ್ದೆವು ಎಂದರೆ ನಿಜ. ಆದರೆ ಬೆಃ 3.00 ಗಂಟೆಗೆ ಎಲ್ಲಾ ಆರೋಪಿತರು ಮನೆ ನುಗ್ಗಿ

ನಮಗೆ ಕೈಕಾಲು ಕಟ್ಟಿ, ಅಲಮೀರಾ ತೆಗೆದು, 17 ರಿಂದ 18 ಕೇಜಿ ಬೆಳ್ಳಿ, 4 ಮೊಬೈಲ್, ನಗದು ಹಣ 30 ಸಾವಿರ ದರೋಡೆ ಮಾಡಿಕೊಂಡು ಹೋಗಿದ್ದಾರೆ ಅಂತಾ ಈಗ ಓದಿ ಹೇಳಿದ ಪ್ರಕಾರ ನಿಪಿ-1 ರಂತೆ ದೂರು ಕೊಟ್ಟಿದ್ದೇನೆಂದರೆ ಸರಿಯಲ್ಲ. ಆರೋಪಿತರೇ ದರೋಡೆ ಮಾಡಿದ್ದಾರೆ ಅಂತಾ ನಿಪಿ-2 ರಂತೆ ಹೇಳಿಕೆ ಮತ್ತು ನಿಪಿ-3 ರಂತೆ ಪುರವಣಿಹೇಳಿಕೆ ಕೊಟ್ಟಿದ್ದೇನೆಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ-1 ಪರಃ ಶ್ರೀ. ಎಂಡಿಕೆ ವಕೀಲರಿಂದ ಃ</u>

<u>ಪಾಟೀ ಸವಾಲು ಆರೋಪಿ-10, 13 ಪರಃ ಶ್ರೀ. ಎಸ್‌ಎಕ್ಯೂ ವಕೀಲರಿಂದ ಃ</u>

<u>ಪಾಟೀ ಸವಾಲು ಆರೋಪಿ-11 ಪರಃ ಶ್ರೀ. ಎಸ್‌ಎಂಪಿ ವಕೀಲರಿಂದ ಃ</u>

<u>ಪಾಟೀ ಸವಾಲು ಆರೋಪಿ-12 ಪರಃ ಶ್ರೀ. ಎಸ್‌ಎಂ ವಕೀಲರಿಂದ ಃ</u>

<u>ಇಲ್ಲ.</u>

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.

| .Form No.4 (Civil) Deposition Sheets (R.P.No.57) |
|---|

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಯಾದಗಿರಿ

ಎಸ್.ಸಿ. ಸಂಖ್ಯೆಃ 75/2017

ಪ್ರಾ. ಸಾ. 2 ಚಾ. ಸಾ. 2

| | | |
|---|---|---|
| ಸಾಕ್ಷಿದಾರರ ಹೆಸರು | : | ಪವನ |
| ತಂದೆಯ ಹೆಸರು | : | ಶಾಂತಿಲಾಲ್ |
| ವಯಸ್ಸು | : | 38 ವರ್ಷಗಳು |
| ಉದ್ಯೋಗ | : | ಬುಸಿನೆಸ್ |
| ವಾಸ | : | ಯಾದಗಿರಿ |

ಪ್ರಮಾಣವಚನ ಬೋಧಿಸಿದ ದಿನಾಂಕಃ 05-09-2019

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದ

ಉತ್ತಮ ಕುಮಾರ್ ನನಗೆ ಗೊತ್ತಿಲ್ಲ.

2. ನಾನು ಮಹಜರಕ್ಕೆ ಸಹಿ ಮಾಡಿದ್ದೇನೆ. ಮಹಜರನ್ನು ನಿಪಿ-4, ನಿಪಿ-4(ಎ) ಸಾಕ್ಷಿಯ ರುಜು ಅಂತಾ ಗುರುತಿಸಲಾಯಿತು. ನನ್ನ ಸಮಕ್ಷಮ ಪೋಲೀಸರು ಪಂಚನಾಮೆ ಮಾಡಿಲ್ಲ ಏನು ವಸ್ತು ಜಪ್ತಿ ಮಾಡಿಲ್ಲ.

(ಈ ಹಂತದಲ್ಲಿ ಸಾರ್ವಜನಿಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ಅನುಮತಿ ಕೊಟ್ಟಿದೆ)

ಪಾಟೀ ಸವಾಲು ಃ ಸಾ.ಅ. ರವರಿಂದ ಃ

3. ದಿಃ 15.2.2016 ರಂದು ಸಾಃ 5.00 ರಿಂದ 6.00 ವರೆಗೆ ಫಿರ್ಯಾದಿ ತೋರಿಸಿದ ಜಾಗೆಯಲ್ಲಿ ನಿಪಿ-4 ರಂತೆ ಪಂಚನಾಮೆಮಾಡಿ ಆ ಸ್ಥಳದಿಂದ ಚಿಲಕದ ಕೊಂಡಿ, ಗುಲಾಬಿ ಬಣ್ಣದ ಬೆಡ್ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಅಲ್ಲಿ ಫೋಟೋ ತೆಗೆದಿದ್ದಾರೆ, ಫೋಟೋವನ್ನು ನಿಪಿ-5 ಅಂತಾ ಗುರುತಿಸಲಾಯಿತು. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ-1 ಪರಃ ಶ್ರೀ. ಎಂಡಿಕೆ ವಕೀಲರಿಂದ ಃ

ಪಾಟೀ ಸವಾಲು ಆರೋಪಿ-10, 13 ಪರಃ ಶ್ರೀ. ಎಸ್‌ವಿಕ್ಯೂ ವಕೀಲರಿಂದ ಃ

ಪಾಟೀ ಸವಾಲು ಆರೋಪಿ-11 ಪರಃ ಶ್ರೀ. ಎಸ್‌ಎಂಪಿ ವಕೀಲರಿಂದ ಃ

ಪಾಟೀ ಸವಾಲು ಆರೋಪಿ-12 ಪರಃ ಶ್ರೀ. ಎಸ್‌ಎಂ ವಕೀಲರಿಂದ ಃ

ಇಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ.

.